www.ecourtsindia.com



**4 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಧ್ರಾವತಿ.**

ದಿನಾಂಕ 08.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪ್ರತಿವಾದಿ ಪರವಾಗಿ ಪಾಟೀ ಸವಾಲು ಶ್ರೀ ಕೆ.ಎನ್.ಎಸ್. ವಕೀಲರಿಂದಃ–**

1. ನನಗೆ ಕನ್ನಡ ಓದಲು ಬರುತ್ತದೆ. ಇಂಗ್ಲೀಷ್ ಸಂಪೂರ್ಣವಾಗಿ ಓದಲು ಬರುವುದಿಲ್ಲ. ಈ ದಿನ ನಾನು ದಾವೆಯ ಸಂಗತಿಯನ್ನು ಓದಿ ತಿಳಿದುಕೊಂಡು ಸಾಕ್ಷ್ಯ ಹೇಳಲು ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಾನು ನನ್ನ ವಾದ ಪತ್ರದಲ್ಲಿ ದಾವಾ ಶೆಡ್ಯೂಲ್ ಸ್ವತ್ತು ನಿರ್ದಿಷ್ಟಾವಾಗಿ ಯಾವ ಏರಿಯಾಗೆ ಸೇರಿದೆ ಎಂದು ನಮೂದು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಸಮಂಜಸ ಉತ್ತರವನ್ನು ನೀಡಿರುವುದಿಲ್ಲ. ನಿಪಿ 5 ಮತ್ತು 6 ರಲ್ಲಿ ನಮೂದಾಗಿರುವಂತೆ ಸ್ಥಳ ಅಥವಾ ಬೀದಿ ಸಿದ್ದಾರೂಢ ನಗರ ಎಂಬುವುದನ್ನು ವಾದಪತ್ರದ ದಾವಾ ಶೆಡ್ಯೂಲ್‌ನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ 2 ರಂತೆ ದಾವಾ ಆಸ್ತಿಯನ್ನು ನಾನು ಖರೀದಿ ಮಾಡಿದ್ದು ಅದರಲ್ಲಿ ದಾವಾ ಆಸ್ತಿಯು ಎಲ್ಲಿ ಬರುತ್ತದೆ ಎಂಬುವುದು ನಮೂದು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಉತ್ತರ ನೀಡಿರುವುದಿಲ್ಲ. ನಿಪಿ 7 ರಲ್ಲಿ ಸಿದ್ದಾರೂಢನಗರ ಮತ್ತು ಸರ್ವೆ ನಂಬರ್ ನಿವೇಶನಗಳಾಗಿ ಪರಿವರ್ತನೆ ಆಗಿರುವುದಿಲ್ಲ ಎಂದರೆ ಸರಿ.

2. ನಿಪಿ 8 ನ್ನು ನಗರ ಯೋಜನಾ ಸದಸ್ಯರು ಸಹಿಯನ್ನು ಮಾಡಿದ್ದು ದಾವಾ ಶೆಡ್ಯೂಲ್ ಗೆ ಸಂಬಂಧಿಸಿಲ್ಲ ಎಂದರೆ ಸಾಕ್ಷಿಯು ಮೌನವಹಿಸಿರುತ್ತಾರೆ. ದಾವಾ ಆಸ್ತಿಯನ್ನು ಖರೀದಿ ಮಾಡಿದ ದಿನದಿಂದ ಒಟ್ಟಿಗೆ ನಿಪಿ 11 ರಂತೆ ಕಂದಾಯವನ್ನು ಪಾವತಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ 11 ನ್ನು ದಾವೆ ಸಲ್ಲಿಸುವ ಉದ್ದೇಶದಿಂದ ಕಂದಾಯವನ್ನು ಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನಿಪಿ 27 ರಲ್ಲಿನ ಸಂಗತಿಗಳು ತಿಳಿದಿದೆ. ನಿಪಿ 27 ರಲ್ಲಿಯೂ ಸಹಾ ಯಾವ ನಗರ ಎಂದು ನಮೂದು ಆಗಿರುವುದಿಲ್ಲ ಎಂದರೆ ಸರಿ. ನನಗೆ ನಿಪಿ 28 ರ ಮಾಹಿತಿ ಇರುತ್ತದೆ. ನಿಪಿ 28 ರ ಶೆಡ್ಯೂಲ್ ನಲ್ಲಿ ನಿವೇಶನ ಸಂಖ್ಯೆ 5 ಅಂಬೇಡ್ಕರ್ ನಗರ ಎಂದು ನಮೂದು ಆಗಿದ್ದು ಮತ್ತು ದಾವಾ ಸ್ವತ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿಯು ಉತ್ತರಿಸಿರುವುದಿಲ್ಲ ತದನಂತರ ಇಲ್ಲ ಎಂದು ಉತ್ತರಿಸಿರುತ್ತಾರೆ. ನಿಪಿ 29 ರಲ್ಲಿನ ಸ್ವತ್ತಿನ ಸಂಖ್ಯೆ

This is a True Copy of the Court Records Online. Authenticated @ districts.ecourtsindia.com/cnr/KASM310008092020/truecopy/order-3.pdf

ಮತ್ತು ಸ್ಥಳ ಹಾಗೂ ದಾವಾ ಶೆಡ್ಯೂಲ್ ಸ್ವತ್ತಿನ ಸಂಖ್ಯೆ ಮತ್ತು ಸ್ಥಳಕ್ಕೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

3. ಪ್ರತಿವಾದಿಯು ವಾರ್ಡ್ ನಂ.6 ಅಂಬೇಡ್ಕರ್ ನಗರ ನಿವೇಶನ ಸಂಖ್ಯೆ 1 ರಲ್ಲಿ ಮನೆಯನ್ನು ನಿರ್ಮಿಸಿ ವಾಸವಾಗಿದ್ದು ಅವರಿಗೆ ತೊಂದರೆ ನೀಡುವ ಸಲುವಾಗಿ ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದಾವೆಯು ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಕಾನೂನುಬದ್ಧವಾಗಿ ಸ್ವತ್ತನ್ನು ಹೊಂದಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

4. ನಾನು ಪ್ರತಿವಾದಿಯ ವಿರುದ್ಧ ನಗರಸಭೆ ಭದ್ರಾವತಿ, ಶಿವಮೊಗ್ಗದ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಶಿವಮೊಗ್ಗದ ಎಸ್.ಪಿ.ರವರಿಗೆ ಮನವಿಯನ್ನು ಸಲ್ಲಿಸಿದ್ದರೂ ಅವರು ಸ್ಪಂದಿಸಿಲ್ಲ ಆದಕಾರಣದಿಂದ ಈ ದಾವೆಯನ್ನು ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 13 ರಿಂದ 18 ನ್ನು ದಾವೆಗೋಸ್ಕರ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ವಿನಾಕಾರಣ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದಾವೆಗೂ ಪ್ರತಿವಾದಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿರುವ ಸ್ವತ್ತು ಎಲ್ಲಿದೆ ಎಂದು ನನಗೆ ಗೊತ್ತಿಲ್ಲ , ಪ್ರತಿವಾದಿಯು ಮನೆಯನ್ನು ನಿರ್ಮಿಸಿಕೊಂಡು ವಾಸ ಇರುವುದರಿಂದ ಅವರಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದಾಖಲಾತಿಗಳಿಗೂ ದಾವಾ ಸ್ವತ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ).

(ತೆ.ನ್ಯಾಸಾ.ಹೇ.ನನ್ನ ಉಕ್ತ ಲೇಖನದಂತೆ ಬೆ.ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

4 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಭದ್ರಾವತಿ.

This is a True Copy of the Court Records Online. Authenticated @ districts.ecourtsindia.com/cnr/KASM310008092020/truecopy/order-3.pdf

www.ecourtsindia.com